# ಪ್ರಾರ್ಥನೆ

## ಶ್ರೀ ಕೃಷ್ಣಾಷ್ಟಕಮ್ - ೧

**ಭಜೇ ವ್ರಜೈಕ ಮಂಡನಂ ಸಮಸ್ತಪಾಪಖಂಡನಂ**
**ಸ್ವಭಕ್ತ ಚಿತ್ತರಂಜನಂ ಸದೈವ ನಂದನಂದನಮ್ ।**
**ಸುಪಿಚ್ಛಗುಚ್ಛಮಸ್ತಕಂ ಸುನಾದವೇಣುಹಸ್ತಕಂ**
**ಅನಂಗರಂಗಸಾಗರಂ ನಮಾಮಿ ಕೃಷ್ಣನಾಗರಮ್ ॥ ೧ ॥**

ವ್ರಜಭೂಮಿಗೆ ಏಕಮಾತ್ರ ಭೂಷಣನೂ, ಎಲ್ಲ ಪಾಪಗಳನ್ನು ನಾಶಮಾಡುವವನೂ, ತನ್ನ ಭಕ್ತರ ಮನಸ್ಸಿಗೆ ಯಾವಾಗಲೂ ಸಂತೋಷವನ್ನುಂಟುಮಾಡುವವನೂ, ನಂದಪುತ್ರನೂ, ಮನೋಹರವಾದ ನವಿಲು ಗರಿಯನ್ನು ತಲೆಯ ಮೇಲೆ ಧರಿಸಿದವನೂ, ಮಧುರ ನಾದವುಳ್ಳ ಕೊಳಲನ್ನು ಕೈಯಲ್ಲಿ ಹಿಡಿದವನೂ, ಕಾಮಕಲಾಸಾಗರನೂ ಆದ ಚತುರ ಕೃಷ್ಣನನ್ನು ನಮಿಸುವೆನು.

**ಮನೋಜಗರ್ವಮೋಚನಂ ವಿಶಾಲಲೋಲಲೋಚನಂ**
**ವಿಧೂತಗೋಪಶೋಚನಂ ನಮಾಮಿ ಪದ್ಮಲೋಚನಮ್।**
**ಕರಾರವಿಂದಭೂಧರಂ ಸ್ಮಿತಾವಲೋಕಸುಂದರಂ**
**ಮಹೇಂದ್ರಮಾನದಾರಣಂ ನಮಾಮಿ ಕೃಷ್ಣವಾರಣಮ್ ॥ ೨ ॥**

ಕಾಮದೇವನ ಗರ್ವವನ್ನು ಕಳೆದಂಥ, ಹೊಳೆಯುತ್ತಿರುವ ವಿಶಾಲವಾಗಿರುವ ಕಣ್ಣುಗಳುಳ್ಳ, ಗೋಪಿಕೆಯರ ಹಾಗೂ ಗೋಪಾಲರ ದುಃಖವನ್ನು ಇಲ್ಲದಂತೆ ಮಾಡಿದಂಥ ಕಮಲಾಕ್ಷನಾದ ಶ್ರೀಕೃಷ್ಣನನ್ನು ನಮಸ್ಕರಿಸುವೆನು. ಕಮಲದಂತೆ ಕೋಮಲವಾಗಿರುವ ಕೈಯಿಂದ ಭೂಮಿಯನ್ನು(ಭೂಭಾಗವಾದ ಗೋವರ್ಧನ ಗಿರಿಯನ್ನು) ಎತ್ತಿ ಹಿಡಿದಂಥ, ಮುಗುಳು ನಗೆಯಿಂದ ಮನೋಹರನಾಗಿ ಕಾಣುವಂಥ, ಇಂದ್ರನನ್ನು ಪ್ರತಿಭಟಿಸಿ ಅವನ ಮಾನವನ್ನು ಕಳೆದವನಾದಂಥ, ಶ್ರೀಕೃಷ್ಣನಿಗೆ ನಮಸ್ಕಾರ ಮಾಡುವೆನು.

**ಕದಂಬಸೂನಕುಂಡಲಂ ಸುಚಾರುಗಂಡಮಂಡಲಂ**
**ವ್ರಜಾಂಗನೈಕವಲ್ಲಭಂ ನಮಾಮಿ ಕೃಷ್ಣದುರ್ಲಭಮ್ ।**
**ಯಶೋದಯಾ ಸಮೋದಯಾ ಸಗೋಪಯಾ ಸನಂದಯಾ**
**ಯುತಂ ಸುಖೈಕದಾಯಕಂ ನಮಾಮಿ ಗೋಪನಾಯಕಂ ॥ ೩॥**

ಕದಂಬ ಪುಷ್ಪಗಳ ಕುಂಡಲಗಳನ್ನು(ಧರಿಸಿದ) ಬಹಳ ಅಂದವಾದ ದುಂಡಗಿನ ಗಲ್ಲಗಳುಳ್ಳ, ಗೋಪಿಯರಿಗೆ ಪ್ರಿಯಕರನಾದ, ಒಬ್ಬನೇ ಒಬ್ಬ (ಅಭಕ್ತರಿಗೆ) ದುರ್ಲಭನಾದ ಕೃಷ್ಣನನ್ನು ನಮಿಸುತ್ತೇನೆ. ಗೋಪ-ನಂದರಿಂದ ಕೂಡಿದ ಸುಪ್ರಸನ್ನಳಾದ ಯಶೋದೆಯಿಂದೊಡಗೂಡಿದ, ಸುಖವನ್ನು ಮಾತ್ರ ಕೊಡುವ ಗೋಪನಾಯಕನನ್ನು (ಶ್ರೀಕೃಷ್ಣನನ್ನು) ನಮಿಸುತ್ತೇನೆ.

**ಸದೈವ ಪಾದಪಂಕಜಂ ಮದೀಯ ಮಾನಸೇ ನಿಜಂ**
**ದಧಾನಮುತ್ತಮಾಲಕಂ ನಮಾಮಿ ನಂದಬಾಲಕಂ ।**
**ಸಮಸ್ತದೋಷಶೋಷಣಂ ಸಮಸ್ತ ಲೋಕಪೋಷಣಂ**
**ಸಮಸ್ತಗೋಪಮಾನಸಂ ನಮಾಮಿ ನಂದಲಾಲಸಮ್ ॥ ೪॥**

ನನ್ನ ಮನಸ್ಸಿನಲ್ಲಿ ಯಾವಾಗಲೂ ಇರುವ ಚರಣಕಮಲಗಳುಳ್ಳ, ಉತ್ತಮವಾದ - ಚಿರಸ್ಥಾಯಿಯಾದ (ಆತ್ಮಧನವನ್ನು) ವಿಪುಲವಾಗಿ ಕೊಡುವ ನಂದಕಿಶೋರನನ್ನು ನಮಿಸುತ್ತೇನೆ. (ಭಕ್ತರ) ಎಲ್ಲ ದೋಷಗಳನ್ನೂ ನಿವಾರಣೆ ಮಾಡುವ, ಎಲ್ಲ ಲೋಕಗಳನ್ನೂ ರಕ್ಷಣೆ ಮಾಡುವ ಕಾರಣ ಎಲ್ಲ ಗೋಪ-ಗೋಪಿಯರ ಹೃದಯಮೂರ್ತಿಯಾದ, ನಂದನ ಮಮತೆಗೆ ವಿಷಯವಾದ ಶ್ರೀಕೃಷ್ಣನಿಗೆ (ಭಕ್ತಿಯಿಂದ) ನಮಸ್ಕಾರ ಮಾಡುತ್ತೇನೆ.

— ಶ್ರೀಶಂಕರಾಚಾರ್ಯ

# ಸೂಕ್ತಿಪ್ರಭ

## ಕವಿಸೂಕ್ತಿ

**ಶ**ರೀರವನ್ನು ಪಡೆದ ಪ್ರಾಣಿಗಳಿಗೆ ಸಾವು ಸ್ವಾಭಾವಿಕ. ಬದುಕಿರುವುದೇ ಅಸ್ವಾಭಾವಿಕ ಅಥವಾ ಕೃತ್ರಿಮ. ಒಂದು ಪ್ರಾಣಿಯು ಉಸಿರಾಡುತ್ತಾ ಒಂದು ಕ್ಷಣವಿದ್ದರೂ ಅದೇ ಲಾಭವೆನ್ನಬೇಕು.

— ಕಾಳಿದಾಸ, *'ರಘುವಂಶ' ದಲ್ಲಿ*

**ಕಾ**ವ್ಯ ಬರೆಯುವವನು ಕವಿಯಲ್ಲ. ಯಾರ ಕಾವ್ಯ ಅವನ ಜೀವನವೇ ಆಗಿಬಿಡುವುದೋ, ಯಾರು ತನ್ನ ಜೀವನವನ್ನೇ ತನ್ನ ಕಾವ್ಯವನ್ನಾಗಿಸುವನೋ ಅವನೇ ಕವಿ.

— ಸುಬ್ರಹ್ಮಣ್ಯ ಭಾರತಿ

**ಯಾ**ವ ಶಿಕ್ಷಣವು ಕೇವಲ ಮಾಹಿತಿಯನ್ನು ಮಾತ್ರ ನೀಡದೆ, ಎಲ್ಲ ಅಸ್ತಿತ್ವದೊಂದಿಗೆ ಸಾಮರಸ್ಯದಿಂದ ಬದುಕಲು ಕಲಿಸುವುದೋ ಅದೇ ಅತ್ಯುನ್ನತ ಶಿಕ್ಷಣ.

— ರವೀಂದ್ರನಾಥ ಠಾಕೂರ್

**ಕ**ಲ್ಲಾಗಿ ಇರಬೇಕು ಕಠಿಣ ಭವ ತೊರೆಯೊಳಗೆ
ಬಿಲ್ಲಾಗಿ ಇರಬೇಕು ಬಲ್ಲವರೊಳು
ಮೆಲ್ಲನೇ ಮಾಧವನ ಮನದಿ ಮೆಚ್ಚಿಸಬೇಕು
ಬೆಲ್ಲವಾಗಿರಬೇಕು ಬಂಧುಜನರೊಳಗೆ

— ಪುರಂದರದಾಸರು